**ಸಾಕ್ಷಿಯನ್ನು ದಿನಾಂಕಃ 27-06-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಒ.ಎಂ.ಅರ್ ವಕೀಲರವರಿಂದಃ**

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ. ಅದರಲ್ಲಿ ಇರುವ ಸಹಿ ನನ್ನದೇ ಇರುತ್ತದೆ.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀಸವಾಲುಃ ಪ್ರತಿವಾದಿಗಳ ಶ್ರೀ. ಎನ್.ಎನ್.ವಕೀಲರವರಿಂದಃ**

ದಾವಾ ಅಸ್ತಿಯ ಪೂರ್ವಕ್ಕೆ ಆನಂದಪ್ಪನ ಹೊಲ, ಪಶ್ಚಿಮಕ್ಕೆ ನನ್ನ ಹೊಲ, ಉತ್ತರಕ್ಕೆ ಕಟ್ಟಿ ಬಸ್ಸಪ್ಪನ ಹೊಲ ಹಾಗೂ ದಕ್ಷಿಣಕ್ಕೆ ರಾಜಣ್ಣನ ಹೊಲ ಇರುವುದು. ನನ್ನ ಜಮೀನಿನ ಸರ್ವೆ ನಂ 132 ಇರುವುದು. ಅದು ನನ್ನ ಮತ್ತು ತಮ್ಮನ ಹೆಸರಿನಲ್ಲಿ ಇರುವುದು. ನನ್ನ ತಮ್ಮನ ಹೆಸರು ಯುವರಾಜ. ವಾದ ಪತ್ರದಲ್ಲಿ ವಾದಿಯರು ಬರೆಸಿರುವ ಚೆಕ್ಕು ಬಂದಿಗಳ ಕುರಿತು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ವಾದಿಯರು ವಾದ ಪತ್ರದಲ್ಲಿ ಪಶ್ಚಿಮ ದಿಕ್ಕಿಗೆ ನನ್ನ ಜಮೀನು ಇದೆ ಎಂದು ಕಾಣಿಸಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ, ವಾದಿಯರು ಹೊಸಳ್ಳಿ ಗಂಗಪ್ಪನ ಹೆಸರು ಕಾಣಿಸಿರುವರು ಅಂದರೆ ಸಾಕ್ಷಿಯು ಅವರು ನನ್ನ ತಂದೆಯಾಗಿರುವರು ಎಂದು ನುಡಿದಿರುವರು. ಪಶ್ಚಿಮಕ್ಕೆ ನನ್ನ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 60 ವರ್ಷಗಳ ಹಿಂದಿನಿಂದಲೂ ವಾದಿಯರು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವರು ಎಂದು ನಾನು ನೋಡಿದ ಅಧಾರದ ಮೇಲೆ ಹೇಳುತ್ತಿದ್ದೇನೆ. ನಾನು 7 ನೇ ವಯಸ್ಸಿನಿಂದ ವಾದಿಯರ ತಂದೆ ದಾವಾ ಸ್ವತ್ತಿಗೆ ಬಂದು ಬೇಸಾಯ ಮಾಡುತ್ತಿದ್ದುದ್ದನ್ನು ನೋಡಿದ್ದೇನೆ. ವಾದಿಯ ತಂದೆಯ ಹೆಸರು ಇಮಾಮ್ ಸಾಬ್ ಇರುತ್ತದೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ವಾದಿಯರ ಕುಟುಂಬ ವ್ಯವಹರಣೆಯ ಕುರಿತು ಮತ್ತು ಅವರು ಬೇರೆ ಬೇರೆ ವಾಸ ಮಾಡುತ್ತಿರುವ ಕುರಿತು ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 6 ಎಕರೆ 50 ಸೆನ್ಸ ಪೈಕಿ 1 ನೇ ವಾದಿ 70 ಸೆನ್ಸನಲ್ಲಿ ಮಾತ್ರ ಸ್ವಾಧೀನ ಇರುವರು ಅಂದರೆ ಸರಿಯಲ್ಲ. 1 ಎಕರೆ 70 ಸೆನ್ಸ ಜಮೀನು ವಾದಿಯರ ಚಿಕ್ಕಪ್ಪನ ಸ್ವಾಧೀನದಲ್ಲಿ ಇರುತ್ತದೆ. ನನಗೆ ಪ್ರತಿವಾದಿಗಳ ಪರಿಚಯ ಇರುವುದು. ಪ್ರತಿವಾದಿಗಳ ತಂದೆಯ ಹೆಸರು ಇಮಾಮ್ ಸಾಬ್. ನನಗೆ ವಾದಿ ಮತ್ತು ಪ್ರತಿವಾದಿಯರ ಪರಿಚಯವೇ ಇರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆಯ ಭಗಕ್ಕೆ ಮೌಖಿಕ

ಪಾಲು ವಿಭಾಗದಲ್ಲಿ 1 ಎಕರೆ 70 ಸೆನ್ಸ ಬಂದಿತ್ತು ಮತ್ತು ಅದು ರಾಗ ಪ್ರತಿವಾದಿಯರ ಸ್ವಾವಧೀನದಲ್ಲಿ ಇರುವುದು ಅಂದರೆ ಸರಿಯಲ್ಲ. ಪ್ರತಿವಾದಿಯರು 1 ಎಕರೆ 70 ಸೆನ್ಸ ನಲ್ಲಿ ಮೆಕ್ಕೆಜೊಳೆ ಬೆಳೆಯನ್ನು ಹಾಕಿರುವರು ಅಂದರೆ ನನಗೆ ಗೊತ್ತಿಲ್ಲ. ವಾದಿಯ ಚಿಕ್ಕಪ್ಪನ 1 ಎಕರೆ 70 ಸೆನ್ಸ ಮಲ್ಲಿ ಮೆಕ್ಕೆಜೊಳವನ್ನು ಹಾಕಿರುವರುಀ ವಾದಿಯರೂ ಕೂಡ ಉಳಿದ ಜಮೀನಿನಲ್ಲಿ ಮೆಕ್ಕೆ ಜೊಳವನ್ನು ಹಾಕಿರುವರು. ವಾದಿಯರು ಉಳಿದ ಎಲ್ಲಾ ಜಮೀನಿನಲ್ಲಿ ಮೆಕ್ಕೆ ಜೊಳೆವನ್ನು ಹಾಕಿರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಬರೆಸಿದ್ದೇನೆ. ನಾನು ವಾದಿಯರ ಮುಲಾಜಿಗೆ ಒಳಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಅಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

27-06-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**